# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

# 8 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ



**– : ರಚನೆ :–**


**ಬಿ. ರವೀಶ್ ಕುಮಾರ್**

**ನಿವೃತ್ತ ಕನ್ನಡ ಭಾಷಾ ಶಿಕ್ಷಕರು**

**ರಾಜ್ಯ ಸಂಪನ್ಮೂಲ ವ್ಯಕ್ತಿಗಳು (ಕನ್ನಡ)**

**# 2905, ಹೊನ್ನಸಿರಿ, 3 ನೆಯ ತಿರುವು,**

**'ಎಫ್' ಬ್ಲಾಕ್, ಕನಕದಾಸನಗರ, ಮೈಸೂರು – 570033**

**ಸಂಚಾರಿವಾಣಿ ಸಂಖ್ಯೆ : 9448958498**

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ
# 8 ನೆಯ ತರಗತಿ
# ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ

## ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 4 |
| 5 | ನೀಲ ನಕಾಶೆ | 5 | 5 |
| 6 | ಪ್ರಶ್ನೆ ಪತ್ರಿಕೆ | 6 | 7 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 8 | 12 |

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ
# 8 ನೆಯ ತರಗತಿ
# ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 20.00 | 06 | 05 |
| 2 | ಗ್ರಹಿಕೆ | 43.00 | 13 | 09 |
| 3 | ಅಭಿವ್ಯಕ್ತಿ | 30.00 | 09 | 03 |
| 4 | ಪ್ರಶಂಸೆ | 07.00 | 02 | 01 |
| | **ಒಟ್ಟು** | **100.00** | **30** | **18** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10.00 | 04 | 04 |
| 2 | ಅತಿ ಕಿರು ಉತ್ತರ – 1 (ಒಂದು ಅಂಕದ ಪ್ರಶ್ನೆಗಳು) | 17.00 | 05 | 05 |
| 3 | ಕಿರು ಉತ್ತರ – 2 (ಎರಡು ಅಂಕಗಳ ಪ್ರಶ್ನೆಗಳು) | 26.50 | 14 | 07 |
| 4 | ದೀರ್ಘ ಉತ್ತರ – 1 (ಮೂರು ಅಂಕಗಳ ಪ್ರಶ್ನೆಗಳು) | 20.00 | 03 | 01 |
| 5 | ದೀರ್ಘ ಉತ್ತರ – 2 (ನಾಲ್ಕು ಅಂಕಗಳ ಪ್ರಶ್ನೆಗಳು) | 26.50 | 04 | 01 |
| | **ಒಟ್ಟು** | **100.00** | **30** | **18** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 40.00 | 12 | 10 |
| 2 | ಸಾಧಾರಣ | 50.00 | 15 | 07 |
| 3 | ಕಠಿಣ | 10.00 | 03 | 01 |
| | **ಒಟ್ಟು** | **100.00** | **30** | **18** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 27.00 | 08 | 04 |
| 2 | **ಪದ್ಯ ಒಟ್ಟು** | 30.00 | 09 | 05 |
| 3 | **ಪಠ್ಯಪೂರಕ ಅಧ್ಯಯನ** | 10.00 | 03 | 03 |
| 5 | **ವ್ಯಾಕರಣ, ಅಲಂಕಾರ ಮತ್ತು ವಾಕ್ಯ ರಚನೆ ಒಟ್ಟು** | 33.00 | 10 | 06 |
| | **ಸಮಗ್ರ ಒಟ್ಟು** | **100.00** | **30** | **18** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಹೂವಾದ ಹುಡುಗಿ | 02 | 01 |
| 2 | ಯಶೋಧರೆ | 03 | 01 |
| 3 | ಅಮ್ಮ | 02 | 01 |
| 4 | ಸಪ್ತಾಕ್ಷರೀ ಮಂತ್ರ | 01 | 01 |
| | ಗದ್ಯ ಒಟ್ಟು | 08 | 04 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವಚನಾಮೃತ | 03 | 02 |
| 2 | ಸೋಮೇಶ್ವರ ಶತಕ | 02 | 01 |
| 3 | ಜೀವನ ದರ್ಶನ | 02 | 01 |
| 4 | ರಾಮಧಾನ್ಯ ಚರಿತೆ | 02 | 01 |
| | ಪದ್ಯ ಒಟ್ಟು | 09 | 05 |

## 3. ಪಠ್ಯ ಪೂರಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಆಹುತಿ | 01 | 01 |
| 2 | ಮಗಳಿಗೆ ಬರೆದ ಪತ್ರಗಳು | 01 | 01 |
| 3 | ಆಟೋರಿಕ್ಷಾದ ರಸ ಪ್ರಸಂಗಗಳು | 01 | 01 |
| | ಪದ್ಯ ಒಟ್ಟು | 03 | 03 |

## 4. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವ್ಯಾಕರಣಾಂಶಗಳು | 04 | 04 |
| 2 | ಗಾದೆ, ಪತ್ರಲೇಖನ / ಪ್ರಬಂಧ ಲೇಖನ | 06 | 02 |
| | ವ್ಯಾಕರಣ, ಅಲಂಕಾರ ಮತ್ತು ವಾಕ್ಯ ರಚನೆ ಒಟ್ಟು | 10 | 06 |

## ಹಂತ : 5(ಎ) 8 ನೆಯ ತರಗತಿ – ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ.

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಹೂವಾದ ಹುಡುಗಿ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 2 | 1 |
| 2 | ಯಶೋಧರೆ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 3 | 1 |
| 3 | ಅಮ್ಮ | ** | ** | ** | ** | ** | ** | 1(2) | ** | ** | | ** | ** | ** | ** | ** | ** | 1(2) | ** | *** | ** | 2 | 1 |
| 4 | ಸಪ್ತಾಕ್ಷರೀ ಮಂತ್ರ | ** | ** | ** | ** | ** | **1(1)** | ** | ** | ** | ** | ** | ** | ** | ** | ** | 1(1) | ** | ** | ** | ** | 1 | 1 |
| | **ಗದ್ಯ ಒಟ್ಟು** | ** | ** | ** | ** | ** | **1(1)** | **2(2)** | ** | ** | ** | 1(3) | ** | ** | ** | ** | **1(1)** | **2(2)** | **1(3)** | ** | ** | **08** | **04** |
| 1 | ವಚನಾಮೃತ | ** | ** | 1(2) | ** | ** | 1(1) | ** | ** | ** | ** | ** | ** | ** | ** | ** | 1(1) | 1(2) | ** | ** | ** | 03 | 2 |
| 2 | ಸೋಮೇಶ್ವರ ಶತಕ | ** | ** | ** | ** | ** | ** | ** | ** | ** | ** | ** | ** | ** | 1(2) | ** | ** | 1(2) | ** | ** | ** | 02 | 1 |
| 3 | ಜೀವನ ದರ್ಶನ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 1 |
| 4 | ರಾಮಧಾನ್ಯ ಚರಿತೆ | ** | ** | ** | ** | ** | | ** | ** | ** | 1(2) | ** | ** | ** | ** | ** | ** | 1(2) | ** | ** | ** | 02 | 1 |
| | **ಪದ್ಯ ಒಟ್ಟು** | ** | ** | **1(2)** | ** | ** | **1(1)** | **1(2)** | ** | ** | 1(2) | ** | ** | ** | **1(2)** | ** | **1(1)** | **4(2)** | ** | ** | ** | **09** | **05** |
| 1 | ಆಹುತಿ | ** | ** | ** | ** | ** | 1(1) | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 2 | ಮಗಳಿಗೆ ಬರೆದ ಪತ್ರಗಳು | ** | ** | ** | ** | ** | 1(1) | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 3 | ಆಟೋರಿಕ್ಷಾದ ರಸಪ್ರಸಂಗಗಳು | ** | ** | ** | ** | ** | 1(1) | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| | **ಪಠ್ಯಪೂರಕ ಅಧ್ಯಯನ ಒಟ್ಟು** | ** | ** | ** | ** | ** | **3(1)** | ** | ** | ** | ** | ** | ** | ** | ** | ** | **3(1)** | ** | ** | ** | ** | **03** | **03** |

*****

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಅಲಂಕಾರ, ಪತ್ರಲೇಖನ / ಪ್ರಬಂಧ ಲೇಖನ | ** | ** | ** | ** | ** | ** | 1(2) | ** | ** | ** | ** | 1(4) | ** | ** | ** | ** | 1(2) | ** | 1(4) | ** | 06 | 02 |
| 2 | ವ್ಯಾಕರಣಾಂಶಗಳು | **04(1)** | ** | ** | ** | ** | ** | ** | ** | ** | ** | ** | ** | ** | ** | **04(1)** | ** | ** | ** | ** | ** | 04 | 04 |
| | **ಒಟ್ಟು** | **04(1)** | ** | ** | ** | ** | ** | 1(2) | ** | ** | | ** | 1(4) | ** | ** | **04(1)** | ** | ** | ** | ** | ** | **10** | **06** |
| | **ಸಮಗ್ರ ಒಟ್ಟು** | **04(1)** | ** | **1(2)** | ** | ** | **5(1)** | **4(2)** | ** | ** | 1(2) | **1(3)** | 1(4) | ** | **1(2)** | **4(1)** | **5(1)** | **7 (2)** | **1(3)** | **1(4)** | ** | **30** | **18** |
| | | **5 – 6** | | | | **09 – 13** | | | | | **03 – 09** | | | | **1 – 2** | **18 – 30** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ
# 8 ನೆಯ ತರಗತಿ
# ಪ್ರಥಮ ಭಾಷೆ ಕನ್ನಡ
## ಪ್ರಶ್ನೆ ಪತ್ರಿಕೆ

**ವಿಷಯ ; ಪ್ರಥಮ ಭಾಷೆ ಕನ್ನಡ** **ವಿಷಯ ಸಂಕೇತ : 01K**
**ಸಮಯ : 1 ಗಂಟೆ 30 ನಿಮಿಷಗಳು** **ಗರಿಷ್ಠ ಅಂಕಗಳು : 30**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 2*1=2**

1. ಅಂಕಿತನಾಮಕ್ಕೆ ಉದಾಹರಣೆಯಾದ ಪದವಿದು;
   (ಎ) ಮರ (ಬಿ) ಶಂಕರ
   (ಸಿ) ವಿದ್ವಾಂಸ (ಡಿ) ಅವನು

2. 'ಹೆಮ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   (ಎ) ಕರ್ಮಧಾರಯ (ಬಿ) ತತ್ಪುರುಷ
   (ಸಿ) ಅಂಶಿ (ಡಿ) ಕ್ರಿಯಾ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. . 2*1=2**

3. ಕಾರ್ಯ: ಕಜ್ಜ : : ಭಕ್ತಿ : ..................
4. ವ್ರೀಹಿ : ಭತ್ತ : : ನರೆದಲಗ : ...........................................

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. . 5*1=5**

5. ಮುನಿಗಳಿಗೆ ಬೇರೆ ಗೂಡವೆ ಇಲ್ಲದಿರಲು ಕಾರಣವೇನು?
6. ಶರಣರು ಕೆಡಿಸುವ ನಿದ್ದೆಯನ್ನು ಹೇಗೆ ಗೆದ್ದಿದ್ದಾರೆ?
7. ಯುವಕನು ರೈಲಿನಲ್ಲಿ ಸಿಕ್ಕಿದ ಮಯದುಕನ ಮನೆಗೆ ಏಕೆ ಹೋದನು?
8. ಹೂಯಾನ್ ತ್ಸಾಂಗ್ ಭರತಖಂಡಕ್ಕೆ ಏಕೆ ಬಂದನು?
9. ಎಚ್. ನರಸಿಂಹಯ್ಯ ಅವರಿಗೆ ವಿಮಾನಯಾನದ ಬಗ್ಗೆ ಭಯವಿಲ್ಲವೇಕೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. . 2*2=4**

10. ಅರಮನೆಗೆ ಹೂವು ಎಲ್ಲಿಂದ ಬರುತ್ತದೆ ಎಂದು ದೊರೆಮಗ ಹೇಗೆ ಕಂಡು ಹಿಡಿದನು?
11. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸಿದನು ಎಂದು ಗೋಪಾಲದಾಸರ ಹೇಳಿದ್ದಾರೆ?

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. . 1*2=2**

12. ಯು. ಆರ್. ಅನಂತಮೂರ್ತಿ

**VI. ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಲಕ್ಷಣದೊಡನೆ ಸಮನ್ವಯಗೊಳಿಸಿ.** **1*2 =2**

13. ಮನೋರಮೆಯ ಮುಖ ಕಮಲದಂತೆ ಅರಳಿತು.

**VII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** . **1*2=2**

14. "ನಮ್ಮಯ ದೇಶಕತಿಶಯ ನರೆದಲಗ"

**VIII. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** . **1*2=2**

15. ಕಾಯಕದಲ್ಲಿ ನಿರತನಾದೊಡೆ

.......................................................................................

.......................................................................................

.......................................................................................

.......................................................................................

ಅಮ್ಮುಶ್ವರ ಲಿಂಗವಯಿತ್ತಾಡೂ ಕಾಯಕದೊಳಗು ॥

**ಅಥವಾ**

ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?

.......................................................................................

.......................................................................................

.......................................................................................

.......................................................................................

ಮುಖವ ನೋಡಲಾಗದು ಅಮುಗೇಶ್ವರಾ?

**IX. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ.** **1*2=2**

**16.** ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತಂ ತಾನಾದವಂ ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥

**X. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1*3=3**

17. ಬೇಹಿನವರನ್ನು ಕಳಿಸುವ ವಿಚಾರದಲ್ಲಿ ರಾಹುಲನ ಅಭಿಪ್ರಾಯವೇನು?

**ಅಥವಾ**

ಯಶೋಧರೆಯ ವಿಧಿಯ ಬಗ್ಗೆ ರಾಜನು ಏನೆಂದು ಹೇಳಿದನು?

**XI. ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1*4=4**

**18.** ನಿಮ್ಮನ್ನು ಚಾಮರಾಜನಗರ ಜಿಲ್ಲೆಯ ಉಡೀಗಾಲ ಗ್ರಾಮದ ಜೆ. ಎಸ್. ಎಸ್. ಪ್ರೌಢಶಾಲೆಯ ವಿದ್ಯಾರ್ಥಿ 'ಶರಣಪ್ಪ' ಎಂದು ಭಾವಿಸಿಕೊಂಡು, ನಿಮ್ಮ ಅಕ್ಕನ ಮದುವೆಗೆ 5 ದಿನಗಳು ರಜೆಯನ್ನು ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

**ರಾಷ್ಟ್ರೀಯ ಹಬ್ಬಗಳು – ಈ ವಿಷಯವನ್ನು ಕುರಿತು ಹನ್ನೆರಡು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ.**

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ
# 8 ನೆಯ ತರಗತಿ
# ಪ್ರಥಮ ಭಾಷೆ ಕನ್ನಡ

**ವಿಷಯ ; ಪ್ರಥಮ ಭಾಷೆ ಕನ್ನಡ** **ವಿಷಯ ಸಂಕೇತ : 01K**

**ಸಮಯ : 1 ಗಂಟೆ 30 ನಿಮಿಷಗಳು** **ಗರಿಷ್ಠ ಅಂಕಗಳು : 30**

---

## ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 2*1=2**

**(ಕ್ರಮಾಂಕದೊಂದಗಿನ ಪ್ರತಿ ಸರಿ ಉತ್ತರಕ್ಕೆ 1 ಅಂಕ)**

1. ಅಂಕಿತನಾಮಕ್ಕೆ ಉದಾಹರಣೆಯಾದ ಪದವಿದು;
   (ಎ) ಮರ (ಬಿ) ಶಂಕರ
   (ಸಿ) ವಿದ್ವಾಂಸ (ಡಿ) ಅವನು

   **ಉತ್ತರ : (ಬಿ) ಶಂಕರ**

2. 'ಹೆಮ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   (ಎ) ಕರ್ಮಧಾರಯ (ಬಿ) ತತ್ಪುರುಷ
   (ಸಿ) ಅಂಶಿ (ಡಿ) ಕ್ರಿಯಾ

   **ಉತ್ತರ : (ಎ) ಕರ್ಮಧಾರಯ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. . 2*1=2**

**(ಪ್ರತಿ ಸರಿ ಉತ್ತರಕ್ಕೆ 1 ಅಂಕ)**

3. ಕಾರ್ಯ: ಕಜ್ಜ : : ಭಕ್ತಿ : **ಬಕುತಿ**
4. ವ್ರೀಹಿ : ಭತ್ತ : : ನರೆದಲಗ : **ರಾಗಿ**

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. . 5*1=5**

**(ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)**

5. **ಮುನಿಗಳಿಗೆ ಬೇರೆಗೊಡವೆ ಇಲ್ಲದಿರಲು ಕಾರಣವೇನು?**
   ಮುನಿಗಳಿಗೆ ತಪಶ್ಶಕ್ತಿಯ ಸಹಾಯವಿರುವುದರಿಂದ ಅವರಿಗೆ ಬೇರೆಗೊಡವೆ ಇರುವುದಿಲ್ಲ.
6. **ಶರಣರು ಕೆಡಿಸುವ ನಿದ್ದೆಯನ್ನು ಹೇಗೆ ಗೆದ್ದಿದ್ದಾರೆ?**
   ಶರಣರು ಕೆಡಿಸುವ ನಿದ್ದೆಯನ್ನು ಯೋಗ ಸಮಾಧಿಯನ್ನು ಮಾಡಿ ಗೆದ್ದಿದ್ದಾರೆ.
7. **ಯುವಕನು ರೈಲಿನಲ್ಲಿ ಸಿಕ್ಕಿದ ಮಯದುಕನ ಮನೆಗೆ ಏಕೆ ಹೋದನು?**
   ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮಗಳು ಮತ್ತು ಸೊಸೆಗೆ ಪಾಠ ಹೇಳಿಕೊಡುವ ಕೆಲಸಕ್ಕಾಗಿ ಮುದುಕನ ಮನೆಗೆ ಬಂದನು.
8. **ಹೂಯಾನ್ ತ್ಸಾಂಗ್ ಭರತಖಂಡಕ್ಕೆ ಏಕೆ ಬಂದನು?**
   ಹಿಯಾನ್‌ತ್ಸಾಂಗ್ ಭರತಖಂಡಕ್ಕೆ ಜ್ಞಾನಾರ್ಜನೆಗಾಗಿ ಮತ್ತು ವಿವೇಕ ಸಾಧನೆಗಾಗಿ ಬಂದನು.

9. ಎಚ್. ನರಸಿಂಹಯ್ಯ ಅವರಿಗೆ ವಿಮಾನಯಾನದ ಬಗ್ಗೆ ಭಯವಿಲ್ಲವೇಕೆ?
ಶ್ರೀ ಹೆಚ್. ನರಸಿಂಹಯ್ಯ ಅವರಿಗೆ ವಿಮಾನದ ಯಾನದ ಬಗ್ಗೆ ಭಯವಿಲ್ಲವೆಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು, ಜನ ಅಡ್ಡ ಬರುವುದಿಲ್ಲ; ಜೊತೆಗೆ ವಿಮಾನವನ್ನು ಯಾರೂ ಓವರ್ ಟೇಕ್ ಮಾಡುವ ಪ್ರಸಂಗವೂ ಇಲ್ಲ.

**IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. . 2*2=4**

**(ಉತ್ತರದ ಅಂಶಗಳನ್ನಾದರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

**10. ಅರಮನೆಗೆ ಹೂವು ಎಲ್ಲಿಂದ ಬರುತ್ತದೆ ಎಂದು ದೊರೆಮಗ ಹೇಗೆ ಕಂಡು ಹಿಡಿದನು?**
ದೊರೆಯ ಮಗನಿಗೆ ತಮ್ಮ ಅರಮನೆಗೆ ಇಷ್ಟು ಸೊಗಸಾದ ಹೂವು ಎಲ್ಲಿಂದ ಬರುತ್ತದೆ ಎಂಬುದನ್ನು ತಿಳಿಯುವ ಕುತೂಹಲ ಉಂಟಾಯಿತು. ಅದಕ್ಕಾಗಿ ಆತನು ತಮ್ಮ ಅರಮನೆಗೆ ಹೂವು ತಂದು ಕೊಡುವ ದೊಡ್ಡ ಹುಡುಗಿಯನ್ನು ಹಿಂಬಾಲಿಸಿದನು. ಮನೆಯ ಸುತ್ತ ಹೂವಿನ ಗಿಡಗಳು ಇಲ್ಲದ್ದನ್ನು ಗಮನಿಸಿ, ಅರಮನೆಗೆ ಹಿಂದಿರುಗಿದನು. ಮಾರನೆಯ ದಿನ ಸೂರ್ಯ ಹುಟ್ಟುವ ಮೊದಲೇ ಹೂವು ತರುತ್ತಿದ್ದ ಮನೆಯ ಮುಂದೆ ಇದ್ದ ದೊಡ್ಡ ಮರದ ಮೇಲೆ ಅವಿತು, ಕುಳಿತು, ಹುಡುಗಿ ಹೂವಾಗುವುದನ್ನು ಕಂಡನು.

**11. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸಿದನೆಂದು ಗೋಪಾಲದಾಸರು ಹೇಳಿದ್ದಾರೆ?**
"ದೇವನು ತನ್ನನ್ನು ಪ್ರೀತಿಯಿಂದ ಸ್ಮರಿಸುವವರ ಪಾತಕಗಳನ್ನು ಪರಿಹರಿಸುವನು. ಭಕ್ತನಾದ ಅಕ್ರೂರನನ್ನು ಪ್ರೀತಿಯಿಂದ ಸಲಹಿದನು. ತನ್ನ ಶಂಖಚಕ್ರವನ್ನು ಪ್ರಯೋಗಿಸಿ ಗಜೇಂದ್ರನನ್ನು ಮೊಸಳೆಯ ಬಾಧೆಯಿಂದ ಕಾಪಾಡಿದನು. ಅಜಮಿಳನು ಭಕ್ತಿಯಿಂದ 'ನಾರಾಯಣ' ಎಂದು ಕರೆದಾಗ ಬಂದು ಸಲಹಿದನು. ಹೀಗೆ ದೇವನು ತನ್ನ ಭಕ್ತರು ಪ್ರೀತಿಯಿಂದ ಕರೆದಾಗ ಬಂದು ರಕ್ಷಣೆಯನ್ನು ಮಾಡುತ್ತಾನೆ" ಎಂದು ಗೋಪಾಲದಾಸರು ಹೇಳುತ್ತಾರೆ.

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. . 1*2=2**

| | |
|---|---|
| ಜನ್ಮಸ್ಥಳ ಮತ್ತು ಕಾಲ | = 1 ಅಂಕ |
| ಕೃತಿಗಳು ಮತ್ತು ಪ್ರಶಸ್ತಿಗಳು | = 1 ಅಂಕ |
| ಒಟ್ಟು | = 2 ಅಂಕಗಳು |

**12. ಯು. ಆರ್. ಅನಂತಮೂರ್ತಿ**
**ಡಾ. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ** ಅವರು **ಕ್ರಿ. ಶ. 1932** ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ **ಮೇಳಿಗೆ ಗ್ರಾಮದಲ್ಲಿ ಜನಿಸಿದರು.** ಇವರು **ಸುರಗಿ,** ಸಂಸ್ಕಾರ, ಭವ, ಅವಸ್ಥೆ, ಭಾರತೀಪುರ, ಮೌನಿ, ಆವಾಹನೆ, ಪ್ರಶ್ನೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**VI. ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಲಕ್ಷಣದೊಡನೆ ಸಮನ್ವಯಗೊಳಿಸಿ. 1*2 =2**

| | |
|---|---|
| ಅಲಂಕಾರವನ್ನು ಹೆಸರಿಸುವುದು | 1. ಅಂಕ |
| ಲಕ್ಷಣ ಬರೆದು, ಸಮನ್ವಯ ಮಾಡುವುದು | 1. ಅಂಕ |
| ಒಟ್ಟು | 2. ಅಂಕಗಳು |

**13. ಮನೋರಮೆಯ ಮುಖ ಕಮಲದಂತೆ ಅರಳಿತು.**
**ಅಲಂಕಾರ** :- ಉಪಮಾಲಂಕಾರ
**ಲಕ್ಷಣ** :- ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನಗಳಿಗಿರುವ) ಪರಸ್ಪರ

ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು **'ಉಪಮಾಲಂಕಾರ'** ಎನ್ನುವರು.

**ಉಪಮೇಯ** :- ಮನೋರಮೆಯ ಮುಖ

**ಉಪಮಾನ** :- ಕಮಲ

**ಉಪಮಾ ವಾಚಕ** :- ಅಂತೆ

**ಸಮಾನ ಧರ್ಮ** :- ಅರಳುವುದು

**ಸಮನ್ವಯ** :- ಇಲ್ಲಿ ಉಪಮೇಯವಾದ ಮನೋರಮೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಹೋಲಿಸಿ ವರ್ಣಿಸಿರುವುದರಿಂದ ಈ ವಾಕ್ಯವು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ.

## VII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. . 1*2=2

| | |
|---|---|
| **ಕವಿ, ಆಕರ ಕೃತಿ ಮತ್ತು ಪಾಠದ ಹೆಸರು** | **= 1 ಅಂಕ** |
| **ಸಂದರ್ಭ ಮತ್ತು ಸ್ವಾರಸ್ಯ ವಿವರಣೆ** | **= 1 ಅಂಕ** |
| **ಒಟ್ಟು** | **= 2 ಅಂಕಗಳು** |

14. **"ನಮ್ಮಯ ದೇಶಕತಿಶಯ ನರೆದಲಗ"**

**ಆಯ್ಕೆ :** ಈ ಮಾತನ್ನು ಶ್ರೀಕನಕದಾಸರು ರಚಿಸಿರುವ **'ರಾಮಧಾನ್ಯ ಚರಿತೆ'** ಎಂಬ ಕೃತಿಯಿಂದ ಆಯ್ದ **'ರಾಮಧಾನ್ಯ ಚರಿತೆ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಶ್ರೀರಾಮನು ಗೌತಮ ಮುನಿಯ ಆಶ್ರಮದಲ್ಲಿ ವಿವಿಧ ಭಕ್ಷ್ಯಭೋಜ್ಯಗಳಿಂದ ಕೂಡಿದ ಆತಿಥ್ಯವನ್ನು ಸ್ವೀಕರಿಸಿ, ತಾನು ಸವಿದ ಧಾನ್ಯಗಳ ಮಹತ್ತ್ವವನ್ನು ತಿಳಿಸಬೇಕೆಂದು ಗೌತಮ ಮುನಿಯನ್ನು ಕೇಳಿಕೊಂಡ ಸಂದರ್ಭದಲ್ಲಿ ಗೌತಮ ಮುನಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** ದೇಶದಲ್ಲಿರುವ ಎಲ್ಲ ಧಾನ್ಯಗಳಿಗಿಂತಲೂ ರಾಗಿಯೇ ಅತ್ಯಂತ ಶ್ರೇಷ್ಠವಾದುದು ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

## VIII. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. . 1*2=2

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

15. ಕಾಯಕದಲ್ಲಿ ನಿರತನಾದೊಡೆ
**ಗುರುದರ್ಶನವಾದಡೂ ಮರೆಯಬೇಕು;**
**ಲಿಂಗಪೂಜೆಯಾದಡೂ ಮರೆಯಬೇಕು;**
**ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು;**
**ಕಾಯಕವೇ ಕೈಲಾಸವಾದ ಕಾರಣ**
ಅಮರೇಶ್ವರ ಲಿಂಗವಯಿತ್ತಾಡೂ ಕಾಯಕದೊಳಗು ॥

**ಅಥವಾ**

ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?
**ಆಡಿನ ಮರಿ ಆನೆಯಾಗಬಲ್ಲುದೆ?**
**ಸೀಳು ನಾಯಿ ಸಿಂಹದ ಮರಿಯಾಗಬಲ್ಲುದೆ?**
**ಅರಿವು ಆಚಾರ ಸಮ್ಯಜ್ಞಾನವನರಿಯದೆ**
**ನಾಮವ ಹೊತ್ತುಕೊಂಡು ತಿರುಗುವ ಗಾವಿಲರ**
ಮುಖವ ನೋಡಲಾಗದು ಅಮುಗೇಶ್ವರ.

**IX. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ.** **1*2=2**

| | |
|---|---|
| **ವಿಷಯಾಂಶಕ್ಕೆ** | **= 1 ಅಂಕಗಳು** |
| **ಅಡಕವಾಗಿರುವ ಮೌಲ್ಯವನ್ನು ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿ** | **= 1 ಅಂಕ** |
| **ಒಟ್ಟು** | **= 2 ಅಂಕಗಳು** |

**16.** ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತಂ ತಾನಾದವಂ ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥

ಈ ಪದ್ಯಭಾಗವನ್ನು ಶ್ರೀ ಪುಲಿಗೆರೆ ಸೋಮನಾಥ ಕವಿಯು ರಚಿಸಿರುವ 'ಸೋಮೇಶ್ವರ ಶತಕ' ಕೃತಿಯಿಂದ ಆಯ್ದ 'ಸೋಮೇಶ್ವರ ಶತಕ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಕವಿ ಸೋಮೇಶ್ವರನು ಲೋಕದಲ್ಲಿ ವಿವಿಧ ವೃತ್ತಿಯ ಜನರು ಹೇಗೆ ಇರಬೇಕು ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.
"ಪ್ರಜೆಗಳನ್ನು ಚೆನ್ನಾಗಿ ಸಂರಕ್ಷಣೆಯನ್ನು ಮಾಡಬಲ್ಲವನೇ ದೊರೆ. ಲಂಚಕ್ಕೆ ಆಸೆ ಪಡದವನೇ ನಿಜವಾದ ಮಂತ್ರಿ. ತಂದೆತಾಯಿಗಳನ್ನು ಸಲಹಬಲ್ಲವನೇ ಧರ್ಮಿಷ್ಠ. ದೇವರಲ್ಲಿ ಭಕ್ತಿಯುಳ್ಳವನೇ ಭಕ್ತನು. ನಿರ್ಭಯನಾದವನೇ ಯೋಧನು. ಒಳ್ಳೆಯ ನಡೆತೆಯುಳ್ಳವನೇ ಬ್ರಹ್ಮಜ್ಞಾನಿ" ಎಂದು ಪುಲಿಗೆರೆ ಸೋಮನಾಥ ಕವಿಯು ಹೇಳುತ್ತಾನೆ.
ಈ ಪದ್ಯದಲ್ಲಿ ವೀರತ್ವ, ಪ್ರಾಮಾಣಿಕತೆ, ಧಾರ್ಮಿಕತೆ, ಭಕ್ತಿ, ಧೀರತ್ವ, ಮೊದಲಾದ ಮೌಲ್ಯಯುತ ಅಂಶಗಳು ಪ್ರತಿಪಾದಿತವಾಗಿವೆ.

**X ಕೆಳಗಿನ ಪ್ರಶ್ನೆಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1*3=3**

**(ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ = 2 ಅಂಕಗಳು, ಪದಬಂಧ ಮತ್ತು ಭಾಷಾ ಶೈಲಿಗೆ = 1 ಅಂಕ)**

**17. ಬೇಹಿನವರನ್ನು ಕಳಿಸುವ ವಿಚಾರದಲ್ಲಿ ರಾಹುಲನ ಅಭಿಪ್ರಾಯವೇನು?**
ರಾಜನು ರಾಹುಲನನ್ನು ಕುರಿತು "ಮೊದಲು ಬೇಹಿನವರು ಹೋಗಿ, ನಿನ್ನ ತಂದೆಯನ್ನು ಕಂಡು, ಅವನಿಷ್ಟವನ್ನು ತಿಳಿದು ಬರಲಿ" ಎಂದು ಹೇಳುತ್ತಾನೆ. ಆಗ ರಾಹುಲನು "ಬೇಹಿನವರು ಹೋಗಿ ಬಂದ ನಂತರ ನಾನು ನನ್ನ ತಂದೆಯೆಡೆಗೆ ಹೋಗಬೇಕೆ? ನಾನೊಲ್ಲೆ, ನಾನೀಗಲೇ ಹೋಗಬೇಕು. ನೀವು ನನ್ನ ತಂದೆಯನ್ನು ನೋಡಿರುವಿರಿ. ಆದ್ದರಿಂದ ನಿಮಗೆ ಅವರನ್ನು ನೋಡಬೇಕೆಂಬ ಆಸೆ ಅಷ್ಟು ಬಲವಾಗಿಲ್ಲ. ಆದರೆ ನಾನು ಹುಟ್ಟಿದಾಗಿನಿಂದಲೂ ಅವರನ್ನು ನೋಡಿಯೇ ಇಲ್ಲ. ಅವರನ್ನು ನೋಡಲು ಇನ್ನೆಷ್ಟು ದಿನ ಕಾಯಬೇಕು. ತಂದೆಯನ್ನು ನೋಡಬೇಕೆಂದು, ಅವರೊಡನಿದ್ದು ಮಾತನಾಡಬೇಕೆಂದು, ನನಗೆ ಬಹಳ ಆಸೆಯಿದೆ. ನೀವು ಭಯಪಡುವುದು ಬೇಡ. ನಾನು ಹೋಗಿ ತಂದೆಯನ್ನು ಕರೆದುಕೊಂಡು ಮತ್ತೆ ಬರುವೆನು" ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

**ಅಥವಾ**

**ಯಶೋಧರೆಯ ವಿಧಿಯ ಬಗ್ಗೆ ರಾಜನು ಏನೆಂದು ಹೇಳಿದನು?**
ಯಶೋಧರೆಯ ವಿಧಿಯ ಬಗ್ಗೆ ರಾಜನು "ನಿನ್ನ ವಿಧಿ ಕೆಟ್ಟದ್ದು ಎಂದು ಎಣಿಸದಿರು, ನಿನ್ನ ಅರಸನು ಈಗ ಲೋಕಕ್ಕೆ ಪೂಜ್ಯನು ಎನಿಸಿರುವನು. ರಾಜ್ಯವನ್ನು ಆಳುವ ಕಿರಿಯ ಹಿರಿಮೆಯನ್ನು ತೊರೆದು; ಜಗದ ಜೀವಗಳನ್ನು ಉದ್ಧರಿಸುವ ಹಿರಿಯ ಹಿರಿಮೆಯನ್ನು ತನ್ನದನ್ನಾಗಿಸಿ ಕೊಂಡಿರುವನು. ರಾಜಾಧಿರಾಜರುಗಳಿಂದ ಓಲೈಸಿಕೊಳ್ಳುತ್ತ ಚಕ್ರಾಧಿಪತಿಯಂತೆ ನಿಂತಿರುವನು. ಏಕೆ ಚಿಂತಿಸುವೆ? ನಿನ್ನ ಹತ್ತು ವರ್ಷದ ತಪದ ಮಹಿಮೆಯಿಂದ ಬೆಳೆದು ನಿಂತ ಮಗನು, ನಿನ್ನ ಪತಿಯನ್ನು ಕರೆತರಲು ಹೊರಟು ನಿಂತಿರುವನು. ವಿಧಿಬದ್ಧವಾಗಿ ನಡೆಯುವ ಹವನದಲ್ಲಿ ಉದ್ಗಾತೃಗಳು ಸ್ವರಹಿಡಿದು ಸೊಗಸಾಗಿ ನುಡಿದ ಶಕ್ತಿಯ ಮಂತ್ರವು ದೇವರನ್ನು ಕರೆತರುವಂತೆ ನಿನ್ನ ಮಗನು ಅವನ ತಂದೆಯನ್ನು ಖಂಡಿತ ಕರೆದುಕೊಂಡು ಬರುವನು" ಎಂದು ಹೇಳುತ್ತಾನೆ.

**X IX. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*4=4**

**18.** ನಿಮ್ಮನ್ನು ಚಾಮರಾಜನಗರ ಜಿಲ್ಲೆಯ ಉಡೀಗಾಲ ಗ್ರಾಮದ ಜೆ. ಎಸ್. ಎಸ್. ಪ್ರೌಢಶಾಲೆಯ ವಿದ್ಯಾರ್ಥಿ 'ಶರಣಪ್ಪ' ಎಂದು ಭಾವಿಸಿಕೊಂಡು, ನಿಮ್ಮ ಅಕ್ಕನ ಮದುವೆಗೆ 5 ದಿನಗಳು ರಜೆಯನ್ನು ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

| ವ್ಯಾವಹಾರಿಕ ಪತ್ರ | |
|---|---|
| ಇಂದ, ಗೆ, ದಿನಾಂಕ, ಸ್ಥಳ, ಸಂಬೋಧನೆ, ವಿಷಯ | = 1 ಅಂಕ |
| ಪತ್ರದ ಒಡಲು ವಿಷಯ ನಿರೂಪಣೆ | = 2 ಅಂಕಗಳು |
| ವಂದನೆಯೊಂದಿಗೆ ಮುಕ್ತಾಯ, ಇಂತಿ, ಸಹಿ. | = 1 ಅಂಕ |
| ಒಟ್ಟು | = 4 ಅಂಕಗಳು |

****

**ಅಥವಾ**

**ರಾಷ್ಟ್ರೀಯ ಹಬ್ಬಗಳು – ಈ ವಿಷಯವನ್ನು ಕುರಿತು ಹನ್ನೆರಡು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ.**

| | |
|---|---|
| ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | = 1 ಅಂಕ |
| ವಿಷಯ ನಿರೂಪಣೆ / ಒಡಲು / ಸಮರ್ಥ ವಿವರಣೆ | = 2 ಅಂಕಗಳು |
| ಉಪ ಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | = 1 ಅಂಕ |
| ಒಟ್ಟು | = 4 ಅಂಕಗಳು |

.